ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ ಬ್ಯಾಡಗಿ

ಸಿಸಿ.ನಂಃ 144/2019

ಫಿರ್ಯಾದಿಃ ಸರ್ಕಾರ

ವಿರುದ್ಧ

ಆರೋಪಿತರುಃ 1) ಅಯೂಬಖಾನ್ @ ಅಯ್ಯು ದಾದಾಪೀರ್ ರಟ್ಟಿಹಳ್ಳಿ
ವಯಾಃ 20 ವರ್ಷ, ಸಾಃ ನಿಟ್ಟೂರು, ತಾಃ ಹಿರೇಕೆರೂರು,
ಜಿಃ ಹಾವೇರಿ.

2) ರಿಜ್ವಾನ್ ನೂರುಲ್ಲಾ ಹಂಚಿ
ವಯಾಃ 20 ವರ್ಷ, ಉದ್ಯೋಗಃ ಕೂಲಿಕೆಲಸ,
ಸಾಃ ನಿಟ್ಟೂರು, ತಾಃ ಹಿರೇಕೆರೂರು, ಜಿಃ ಹಾವೇರಿ.

:- ದೋಷಾರೋಪಣೆ :-

ನಾನು ಶ್ರೀ ರಾಜೇಶ್ ಎನ್.ಹೊಸಮನೆ, ಬಿ.ಎಸ್ಸಿ.ಎಮ್.ಎಲ್ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಬ್ಯಾಡಗಿ, ಮೇಲೆ ನಮೂದಿಸಿದ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ-

ಬ್ಯಾಡಗಿ ಪೊಲೀಸ್ ಠಾಣಾ ಹದ್ದಿ ಪೈಕಿ ಬ್ಯಾಡಗಿ ಶಹರದ ಬ್ಯಾಡಗಿ-ರಟ್ಟಿಹಳ್ಳಿ ರಸ್ತೆಯ ಫಿರ್ಯಾದಿಯ ಓಂ ಕಮ್ಯುನಿಕೇಷನ್ ಮೊಬೈಲ್ ಅಂಗಡಿಯನ್ನು ದಿಃ 19.12.2019 ರಂದು ಬೆಳಗಿನ 1-30 ಗಂಟೆಯ ಸುಮಾರಿಗೆ ಆರೋಪಿತರಾದ ನೀವು ಕೂಡಿ ಮೊಬೈಲ್ ಅಂಗಡಿಯ ಸೆಟರ್ಸಗೆ ಹಾಕಿದ ಕೀಲಿ ಕಟ್ ಮಾಡಿ, ಕಬ್ಬಿಣದ ಸೆಟರ್ಸ ಮುರಿದು ಒಳಗೆ ಅತೀಕ್ರಮಣ ಪ್ರವೇಶ ಮಾಡಿದ ಅಪರಾಧಕ್ಕಾಗಿ ಭಾ. ದಂ. ಸಂಹಿತೆ ಕಲಂಃ 457 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಕೂಡಿ ಫಿರ್ಯಾದಿಯ ಅಂಗಡಿಯಲ್ಲಿದ್ದ ರೆಡ್ಮಿ ಕಂಪನಿಯ 5 ಮೊಬೈಲ್ ಪೋನ್, ಸ್ಯಾಮಸಂಗ್ ಕಂಪನಿಯ 10 ಮೊಬೈಲ್ ಪೋನ್, ಕಾರ್ಬನ್ ಕಂಪನಿಯ 2 ಮೊಬೈಲ್ ಪೋನ್, ಲಾವಾ ಕಂಪನಿಯ 3 ಮೊಬೈಲ್ ಪೋನ್, ನೋಕಿಯಾ ಕಂಪನಿಯ 6 ಮೊಬೈಲ್ ಪೋನ್, ಟೆಕ್ನೋ ಕಂಪನಿಯ 2 ಮೊಬೈಲ್ ಪೋನ್, ಮೋಬಿಸ್ಟಾರ್ ಕಂಪನಿಯ 2 ಮೊಬೈಲ್ ಪೋನ್, ಇಂಟೆಕ್ಷ ಕಂಪನಿಯ 1 ಮೊಬೈಲ್ ಪೋನ್ ಒಟ್ಟು 31 ಸ್ಮಾರ್ಟ ಪೋನ್ ಹಾಗೂ ಕೀ ಪ್ಯಾಡ್ ಮೊಬೈಲ್ ಪೋನಗಳು ಇವೆಲ್ಲವುಗಳ ಅಃಕಿಃ 1,74,485/- ರೂ ಕಿಮ್ಮತ್ತಿನ ಮೊಬೈಲ್ ಪೋನ್‌ಗಳನ್ನು ಕಳ್ಳತನ ಮಾಡಿಕೊಂಡು ಹೋದ ಅಪರಾಧಕ್ಕಾಗಿ ಭಾ. ದಂ. ಸಂಹಿತೆ ಕಲಂಃ 380 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಮೇಲಿನ ಅಪರಾಧವನ್ನು ನೀವು ಇದೇ ನ್ಯಾಯಾಲಯದ ಅಧಿಕಾರವ್ಯಾಪ್ತಿ ಮತ್ತು ಸಂಜ್ಞೆಯಡಿ ಮಾಡಿರುವ ಕಾರಣ ನಿಮ್ಮ ಮೇಲಿನ ವಿಚಾರಣೆ ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 24.02.2020 ರಂದು ಆದೇಶಿಸುತ್ತೇನೆ.

<u>ಆಪಾಧನೆ</u>

ಪ್ರಶ್ನೆ.1- ಮೇಲಿನ ದೋಷಾರೋಪಣೆಯಲ್ಲಿ ನೀವು ಮಾಡಿರುವ ಅಪರಾಧದ ಬಗೆಗಿನ ವಿವರಣೆ ಹಿಂದಿಯಲ್ಲಿ ಓದಿ ಹೇಳಿದ್ದು ನಿಮಗೆ ಅರ್ಥವಾಯಿತಾ?

ಉತ್ತರಃ ಆರೋಪಿ ನಂಃ 1 ಮತ್ತು 2

ಪ್ರಶ್ನೆ.2- ಸದರಿ ಅಪರಾಧವನ್ನು ನೀವು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆನ್ನುವಿರಾ??

ಉತ್ತರಃ ಆರೋಪಿ ನಂಃ 1 ಮತ್ತು 2

(ಮೇಲಿನ ಆಪಾಧನೆಯನ್ನು ಆರೋಪಿತರಿಗೆ ಅರ್ಥವತ್ತಾಗಿ ತಿಳಿಸಿ ಹೇಳಿ ಕೇಳಿದ ನಂತರ ಅದಕ್ಕೆ ಅವರು ಕೊಟ್ಟ ಉತ್ತರವನ್ನು ಅವರು ಹೇಳಿದಂತೆ ಬರೆದುಕೊಳ್ಳಲಾಗಿದೆ ಅಂತಾ ದೃಢೀಕರಿಸುತ್ತೇನೆ)

ಬ್ಯಾಡಗಿ
ದಿನಾಂಕಃ 24.02.2020

ದಿವಾಣಿ ನ್ಯಾಯಾಧೀಶರು ಮತ್ತು ಪ್ರದನ್ಯಾದಂ
ಬ್ಯಾಡಗಿ.